ಮರ್ರೆ ಮರಣದಂಡನೆಗೆ ಗುರಿಯಾದವರ ಸೆಲ್‌ನಲ್ಲಿದ್ದ; ಅಷ್ಟರಲ್ಲೆ ಅವನ ಕ್ಷಣಗಣನೆಯೂ ಶುರುವಾಗಿತ್ತು. ಕಾರಿಡಾರಿನ ಸಿಲಿಂಗ್‌ನ ಜೋಲು ದೀಪದಿಂದ ಬೀಳುತ್ತಿದ್ದ ಬೆಳಕಿಗೆ ಅವನ ಎದುರಿನ ಮೇಜು ಹೊಳೆಯುತ್ತಿತ್ತು. ಬಿಳಿ ಹಾಳೆಯೊಂದರ ಮೇಲೆ ಒಂಟಿ ಇರುವೆ ಅತ್ತಿಂದಿತ್ತ ಅಡ್ಡಾದಿಡ್ಡಿ ಓಡಾಡುತ್ತಿತ್ತು. ಒಂದು ಕಾಗದದ ಚೂರನ್ನು ಮರ್ರೆ ಇರುವೆಯ ದಾರಿಗೆ ಅಡ್ಡ ಹಿಡಿಯುತ್ತಿದ್ದ. ಅವನಿಗೆ ವಿಧಿಸಲಾದ ಮರಣದಂಡನೆ ಸಂಜೆ ಎಂಟು ಗಂಟೆಗೆ ಜಾರಿಗೊಳ್ಳುವುದಿತ್ತು; ಅವನನ್ನು ವಿದ್ಯುತ್ ಪ್ರವಾಹಕ್ಕೆ ಒಡ್ಡುವುದು ಖಚಿತವಾಗಿತ್ತು. ಕ್ರಿಮಿಗಳಲ್ಲೆಲ್ಲ ಬಹಳ ಜಾಣ ಎನ್ನಿಸಿಕೊಂಡಿದ್ದ ಇರುವೆಯ ದೊಂಬರಾಟ ನೋಡುತ್ತ ಮರ್ರೆ ಮುಗುಳು ನಗುತ್ತಿದ್ದ.

ಇನ್ನೂ ಏಳು ಜನ ಆ ಸಾಲಾದ ಕೊಠಡಿಗಳಲ್ಲಿ ಮರಣದಂಡನೆ ಜಾರಿಗೊಳ್ಳಬೇಕಾದ ತಮ್ಮ ದಿನಕ್ಕಾಗಿ ಕಾಯುತ್ತಿದ್ದರು. ಮರ್ರೆ ಜೈಲು ಸೇರಿದ ನಂತರ ಅಲ್ಲಿಂದ ಮೂರು ಜನರನ್ನು ಮರಣದಂಡನೆಗೆ ಕರೆದೊಯ್ದುದನ್ನು ನೋಡಿದ್ದ. ಅವರಲ್ಲೊಬ್ಬ ಹುಚ್ಚನಂತೆ ಆಡುತ್ತಿದ್ದ; ಬಲೆಗೆ ಸಿಕ್ಕಿದ ತೋಳದಂತೆ ಸೆಣಸಾಡುತ್ತಿದ್ದ. ಹುಚ್ಚನೇ ಆಗಿಬಿಟ್ಟಿದ್ದ ಮತ್ತೊಬ್ಬ ಮುಖವೆತ್ತಿ ತುಟಿ ಅಲುಗಿಸುತ್ತ ಸ್ವರ್ಗಕ್ಕೆ ಏನೋ ಹೇಳುತ್ತಿದ್ದ. ಬಡಕಲು ಕಡ್ಡಿಯಾಗಿದ್ದ ಮೂರನೆಯ ಕೈದಿ ಕುಸಿದು ಬಿದ್ದು ಹಲಗೆಯೊಂದಕ್ಕೆ ಗಟ್ಟಿ ಅವುಚಿಕೊಂಡಿದ್ದ. ಮರ್ರೆ ತಾನು ಹೇಗೆ ವರ್ತಿಸಬಹುದು ಎಂದು ಕುತೂಹಲಗೊಂಡ. ತನ್ನ ಹೃದಯ, ಕಾಲು ಮತ್ತು ಮುಖ ಹೇಗೆ ವರ್ತಿಸಬಹುದು ಎನ್ನುವ ಯೋಚನೆಯಲ್ಲಿ ಅವನಿಗೆ ಆಶ್ಚರ್ಯವಾಗತೊಡಗಿತು. ಏಕೆಂದರೆ ಅದೇ ಸಂಜೆ ಅವನ ಸರತಿಯಾಗಿತ್ತು; ಈಗ ಎಂಟು ಗಂಟೆ ಆಗುತ್ತಿರಬಹುದು ಎಂದು ಲೆಕ್ಕ ಹಾಕಿದ.

ಬೊನಿಫ್ಯಾಶೊ ಅಲ್ಲೇ ಇದ್ದ, ಅವನ ಎದುರಿನ ಸೆಲ್‌ನಲ್ಲಿ. ಅವನು ಸಿಸಿಲಿ ಪ್ರಜೆ. ತಾನು ಮದುವೆಯಾಗಲಿರುವ ಹುಡುಗಿಯನ್ನು ಕೊಂದುದಷ್ಟೇ ಅಲ್ಲದೆ ತನ್ನನ್ನು ಬಂಧಿಸಲು ಬಂದಿದ್ದ ಇಬ್ಬರು ಅಧಿಕಾರಿಗಳನ್ನೂ ಮುಗಿಸಿದ್ದ. ಬೊನಿಫ್ಯಾಶೊ ಮತ್ತು ಮರ್ರೆ ಎಷ್ಟೋ ಸಲ ಚೆಸ್ ಆಡಿದ್ದರು. 'ಏಯ್ ಮರ್ರೆ, ಏನು ಅನಿಸ್ತಾ ಇದೆ? ಆರಾಮಿದ್ದೀಯೆ ಹೌದೋ ಅಲ್ಲವೋ?' ಬೊನಿಫ್ಯಾಶೊ ಕೂಗಿ ಕೇಳಿದ. ಅವನ ಕಂಚಿನ ಕಂಠ ಅಭೇದ್ಯವಾಗಿತ್ತು. 'ಹೌದು' ಎಂದ ಮರ್ರೆ, ಅವನ ಧ್ವನಿಯಲ್ಲಿ ಯಾವುದೇ ಏರಿಳಿತವಿರಲಿಲ್ಲ. ಆಗ ಅವನು ಇರುವೆ ಕಾಗದದ ಚೂರನ್ನು ನಿಧಾನವಾಗಿ ಹತ್ತುವುದನ್ನು ಕಾಯ್ದು ಅದನ್ನು ಕಲ್ಲು ಹಾಸಿನ ನೆಲದ ಮೇಲೆ ಬಿಡುವುದರಲ್ಲಿ ಮಗ್ನನಾಗಿದ್ದ.

'ಗುಡ್'ಎಂದ ಬೊನಿಫ್ಯಾಶೊ. 'ಎಲ್ಲರಂತೆ ನಾವೂ ಒಂದು ದಿನ ಸಾಯಲೇಬೇಕಲ್ಲ ಮರ್ರೆ; ನನ್ನ ಪಾಳಿ ಮುಂದಿನ ವಾರ; ಸರಿ ಬಿಡು. ಕಳೆದ ಬಾರಿ ಚೆಸ್‌ನಲ್ಲಿ ನೀನು ಸೋತಿದ್ದೆ. ನೆನಪಿನಲ್ಲಿ ಇರಲಿ; ಮುಂದೆಂದಾದರೂ ಒಂದು ದಿನ ನಾವು ಮತ್ತೆ ಆಡಲೂಬಹುದು. ಅವರು ನಮ್ಮನ್ನು ಎಲ್ಲಿಗೆ ಕಳಿಸುತ್ತಿದ್ದಾರೋ ಅಲ್ಲೇ ನಾವು ಒಬ್ಬರನ್ನೊಬ್ಬರು ಕರೆಯಲೂಬಹುದು.' ಬೊನಿಫ್ಯಾಶೊ ಹಾಗೆ ಬಲವಾಗಿಯೇ ನಂಬಿಕೊಂಡಿದ್ದ. ಆದ್ದರಿಂದ ಮರ್ರೆಗೆ ಅದನ್ನು ತತ್ವಜ್ಞಾನಿಯಂತೆ ಹೇಳಿದ್ದ. ಅವನ ದೊಡ್ಡ ನಗು ಅಲೆಅಲೆಯಾಗಿ ಮರ್ರೆಯ ಕಿವಿಗೆ ಅಪ್ಪಳಿಸಿತು. ಮರ್ರೆಯ ಜಡಗೊಂಡಿದ್ದ ಚೈತನ್ಯ ಅದರಿಂದ ಮತ್ತೂ ತಣ್ಣಗಾಗುವ ಬದಲು ಬೆಚ್ಚಗಾಯಿತು. ಏನೇ ಆದರೂ ಬೊನಿಫ್ಯಾಶೊ ಇನ್ನೂ ಒಂದು ವಾರ ಬದುಕಿರುತ್ತಾನೆ.

ಜೈಲುವಾಸಿಗಳಿಗೆ ಕಾರಿಡಾರಿನ ತುತ್ತತುದಿಯಲ್ಲಿರುವ ಬಾಗಿಲಿನ ಸ್ಟೀಲ್ ಬೋಲ್ಟ್ ತೆಗೆದ ಸದ್ದು ಕೇಳಿಸಿತು. ಅದು ಎಲ್ಲರಿಗೂ ತೀರಾ ಪರಿಚಿತವಾದ ಸದ್ದು. ಮರ್ರೆ ಇರುವ ಸೆಲ್ ಕಡೆಗೆ